ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	::	1404
ಸದಸ್ಯರ ಹೆಸರು	::	ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ:	::	18.03.2020
ಉತ್ತರಿಸುವ ಸಚಿವರು	::	ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ನಿಯಮಗಳನ್ನು ಪಾಲಿಸದೇ 12.24 ಎಕರೆ ಸರ್ಕಾರಿ ಜಮೀನನ್ನು ಖಾಸಗಿ ವ್ಯಕ್ತಿಗೆ ಮಂಜೂರು ಮಾಡಿರುವ ವಿಚಾರ ಮಾಧ್ಯಮಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು ರಾಯಭಾಗ ತಾಲ್ಲೂಕಿನ ಸುಲ್ತಾನಪುರ ಗ್ರಾಮದ ರಿ.ಸ.ನಂ.82/2 ರಲ್ಲಿ ಕ್ಷೇತ್ರ 12ಎ-24ಗುಂ. ಗಾಯರಾಣ ಜಮೀನಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿ, ಚಿಕ್ಕೋಡಿ ಇವರಲ್ಲಿ ಮೇಲ್ಮನವಿ ಸಲ್ಲಿಕೆಯಾಗಿದ್ದು, ಮೇಲ್ಮನವಿ ವಿಚಾರಣೆ ಹಂತದಲ್ಲಿರುತ್ತದೆ.
ಆ)	ಅಕ್ರಮ-ಸಕ್ರಮ ನಿಯಮದಡಿಯಲ್ಲಿ ಜಮೀನು ಮಂಜೂರು ಮಾಡಲು ಇರುವ ನಿಯಮಗಳೇನು (ವಿವರ ನೀಡುವುದು);	1) ಅಕ್ರಮ ಸಾಗುವಳಿದಾರರು ನಮೂನೆ-50, 53 ಮತ್ತು 57ರಲ್ಲಿ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಬಹುದು. 2) ಸನ್ 2005ಕ್ಕಿಂತ ಪೂರ್ವದಲ್ಲಿ ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿರಬೇಕು. 3) ಗರಿಷ್ಟ 4-38 ಎಕರೆ ಖುಷ್ಕಿ ಮತ್ತು 2ಎ-**29**ಗುಂಟೆ ತರಿ, ಬಾಗಾಯತ, ತೋಟದ ಜಮೀನು ಮಂಜೂರಿಸಲು ಅವಕಾಶ ಇರುತ್ತದೆ.
ಇ)	ಈ ನಿಯಮಗಳಡಿಯಲ್ಲಿ ಜಮೀನು ಮಂಜೂರು ಮಾಡಲು ಯಾರಿಗೆ ಅಧಿಕಾರವಿದೆ;	ಈ ನಿಯಮಗಳಡಿಯಲ್ಲಿ ಜಮೀನು ಮಂಜೂರು ಮಾಡಲು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗೆ ಅಧಿಕಾರ ಇರುತ್ತದೆ.
ಈ)	ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ರಚಿಸಿದ ಸಮಿತಿ ತೆಗೆದುಕೊಂಡ ಠರಾವುಗಳಾವವು;	ಈಗಿರುವ ಸಮಿತಿ ಇಲ್ಲಿಯವರೆಗೆ ಯಾವುದೇ ಠರಾವು ತೆಗೆದುಕೊಂಡಿರುವುದಿಲ್ಲ.
ಉ)	ಈ ರೀತಿಯ ಅಕ್ರಮಗಳನ್ನು ಎಸಗಿದವರ ಮೇಲೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ?	ಪ್ರಕರಣಕ್ಕೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿ, ಚಿಕ್ಕೋಡಿ ಇವರಲ್ಲಿ ಮೇಲ್ಮನವಿ ಸಲ್ಲಿಕೆಯಾಗಿದ್ದು, ಮೇಲ್ಮನವಿಯ ವಿಚಾರಣೆಯಿಂದ ಅಕ್ರಮ ಎಸಗಿರುವುದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು

ಸಂಖ್ಯೆ: ಆರ್‌ಡಿ 26 ಎಲ್‌ಜಿಎಲ್ 2020

(ಆರ್.ಅಶೋಕ್)
ಕಂದಾಯ ಸಚಿವರು